IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಗುಂಡ್ಲಹಳ್ಳಿಯ ಅಪರೂಪದ ಗಂಡು ಆನೆಯ ಗೀರು ರೇಖಾ ಶಿಲ್ಪ

**ಡಾ.ಎಸ್.ಜಿ.ರಾಮದಾಸ ರೆಡ್ಡಿ.**
**ಇತಿಹಾಸ ಸಹ ಪ್ರಾಧ್ಯಾಪಕರು,**
**ಸರ್ಕಾರಿ ಪ್ರಥಮ ದರ್ಜೆ ಕಾಲೇಜು,**
**ಕುವೆಂಪುನಗರ, ಮೈಸೂರು.**
**ಮೊ. ೯೮೪೫೩೦೯೦೮೧**

ಪ್ರಾಚೀನ ಮಾನವ ತನ್ನ ದೈನಂದಿನ ಜೀವನದಲ್ಲಿ ಕಂಡಂತಹ ಸಿಹಿ,ಕಹಿ ಅನುಭವಗಳನ್ನು ಬೇರೆಯವರಿಗೆ ತಿಳಿಸುವ ಉದ್ದೇಶದಿಂದ ತಾನು ವಾಸಿಸುತ್ತಿದ್ದ ಗವಿಗಳಲ್ಲೋ, ಕಲ್ಲಾಸರೆಗಳ ಮೇಲೋ ಚಿತ್ರಗಳನ್ನು ಮೂಡಿಸಿದನು, ಹೀಗೆ ಕಲೆ ಆರಂಭವಾಯಿತು. ಇದೇ ಪ್ರಾಗಿತಿಹಾಸ ಕಾಲದ ಕಲೆ ಎನಿಸಿದೆ.

ಆದಿಮಾನವನ ಕಲೆಯನ್ನು ಇತಿಹಾಸಪೂರ್ವ ಕಲೆ ಅಥವಾ ಪ್ರಾಗೈತಿಹಾಸಿಕ ಕಲೆ ಎಂದೂ ಕರೆಯುವುದುಂಟು. **ಕಲೆಯೆಂಬುದು** ಜಗತ್ತು ಎಂಬ ಭೌತಿಕ ವಸ್ತುವಿನ ಅಮೂರ್ತ ಕಲ್ಪನೆಯ ರೂಪಣ, ಸಂಕೇತಗಳ ಮೂಲಕ ಅಭಿವ್ಯಕ್ತಿ ಮತ್ತು ಇತರರೊಂದಿಗೆ ಸಾಧಿಸುವ ಸಂಪರ್ಕ ವಿಧಾನವಾಗಿದೆ. ಪ್ರಾಚೀನ ಮಾನವನ ಸಾಮರ್ಥ್ಯ ಹಾಗೂ ವಿಕಾಸವನ್ನು ಅರಿಯಲು ಪ್ರಾಗೈತಿಹಾಸಿಕ ಕಲೆ ಪ್ರಮುಖ ಮಾನದಂಡವಾಗಿದೆ. ಪ್ರಾಗಿತಿಹಾಸ ಕಾಲದಲ್ಲಿ ಪ್ರಧಾನವಾಗಿ ವರ್ಣಚಿತ್ರಗಳು (ಪೇಯಿಂಟಿಂಗ್ಸ್), ಗೀರು ರೇಖಾಚಿತ್ರಗಳು (ಎನ್‌ಗ್ರೇವಿಂಗ್ಸ್) ಮತ್ತು ಕುಟ್ಟಿ ಮೂಡಿಸಿದ ಚಿತ್ರಗಳು (ಬ್ರುಯಿಸಿಂಗ್ಸ್) ಎಂಬ ಮೂರು ಪ್ರಕಾರದಲ್ಲಿ ಕಂಡುಬರುತ್ತವೆ.

ಬಯಲು ಬಂಡೆಗಳಲ್ಲಿ ಗೀರು ರೇಖಾಚಿತ್ರಗಳು ಮತ್ತು ಕುಟ್ಟಿ ಮೂಡಿಸಿದ ಚಿತ್ರಗಳು ಕಂಡುಬರುತ್ತವೆ. ಇವು ವರ್ಣಚಿತ್ರಗಳಿಗಿಂತ ಸಹಜವಾಗಿ ಭಿನ್ನವಾಗಿವೆ. ಬೆಟ್ಟ ಗುಡ್ಡಗಳ ಇಲ್ಲವೆ ಬಯಲಿನ ಬಂಡೆಗಳು, ಹುಟ್ಟು ಗುಂಡುಗಳಲ್ಲಿ ಇಂಥ ಚಿತ್ರಗಳು ಕಾಣ ಸಿಗುತ್ತವೆ. ಸಾಮಾನ್ಯವಾಗಿ ಹುಲ್ಲುಗಾವಲು,ಬೆಟ್ಟ,ಗುಡ್ಡ ಮತ್ತು ನೀರಿನ ತಾಣಗಳಾದ ನದಿ, ಹಳ್ಳ, ಕೆರೆ, ಕುಂಟೆಗಳ ಸಮೀಪದ ಬಂಡೆಗಳಲ್ಲಿ ಈ ಚಿತ್ರಗಳು ಕಂಡು ಬರುತ್ತವೆ.

ಗೀರು ಚಿತ್ರಗಳನ್ನು ಉಳಿಯಂತಹ ಮೊನಚಾದ ಉಪಕರಣದಿಂದ ಗೆರೆಗಳನ್ನು ಮೂಡಿಸಿ ಚಿತ್ರಗಳನ್ನು ಮೂಡಿಸುತ್ತಿದ್ದರು. ಈ ತಂತ್ರದಲ್ಲಿ ಚಿತ್ರಗಳು ಕೇವಲ ಬಾಹ್ಯ ರೇಖೆಗಳಲ್ಲಿ ರಚಿಸಲಾಗಿರುತ್ತದೆ. ಮತ್ತು ಈ ರೇಖೆಗಳು ಸ್ವಲ್ಪ ಆಳವಾಗಿರುತ್ತವೆ. ಇಲ್ಲೂ ಕೂಡ ಮನುಷ್ಯರ, ಪ್ರಾಣಿಗಳ ರೇಖಾ ಚಿತ್ರಗಳಿರುತ್ತವೆ. ಹಾಗೆಯೇ ಕುಟ್ಟಿ ಮೂಡಿಸಿದ ಚಿತ್ರಗಳ ರಚನಾ ಕ್ರಮ ವಿಭಿನ್ನವಾಗಿರುತ್ತದೆ. ಸಮಾನ ಮೇಲ್ಮೈಯ ಮೇಲೆ ಬೇಕಾದ ಚಿತ್ರವನ್ನು ಮೂಡಿಸುವದಕ್ಕೆ ಅನುಕೂಲಕರವಾದ ಮೊಂಡು ತುದಿಯುಳ್ಳ ಉದ್ದನೆ ಕಲ್ಲು ತುಂಡಿನಿಂದ ಏಕ ಪ್ರಕಾರವಾಗಿ ಕುಟ್ಟಿ ಕುಟ್ಟಿ ಚಿತ್ರಗಳನ್ನು ಮೂಡಿಸಲಾಗಿರುತ್ತದೆ.

ಹಳೆಯ ಶಿಲಾಯುಗದ ಆದಿ ಹಳೆಯ ಶಿಲಾಯುಗ, ಮಧ್ಯ ಹಳೆಶಿಲಾಯುಗದ ನಂತರ ಅಂತ್ಯ ಹಳೆಶಿಲಾಯುಗ ಕಾಣಿಸಿಕೊಳ್ಳುತ್ತದೆ. ಮಾನವನ ಜೀವನ ಸಂಸ್ಕೃತಿಯ ವಿಭಿನ್ನ ವಿಕಾಸದೊಂದಿಗೆ ಕಲೆಯ ದೃಷ್ಟಿಯಿಂದಲೂ ಮಹತ್ವವಾದ ಹಂತವಿದು. ಆಫ್ರಿಕಾ, ಯುರೋಪ್ ಹಾಗೂ ಏಷ್ಯಾದ ರಾಷ್ಟ್ರಗಳಲ್ಲಿ ಈ ಹಂತಗಳಲ್ಲಿ ರಚಿತವಾದ ಶಿಲಾಚಿತ್ರಗಳ ಮೊದಲ ಕುರುಹುಗಳನ್ನು ಕಾಣಬಹುದು.

ಪೂರ್ವ ಮಧ್ಯ ಆಫ್ರಿಕದ ಆದಿಮಾನವನ ಉಗಮದ ಸ್ಥಾನವೆಂದು ಪರಿಗಣಿಸಲ್ಪಟ್ಟಿದೆ. ಆಫ್ರಿಕಾದ ಮಾನವ ಮೊದಲಿಗೆ ಪ್ರಾಣಿ ಬೇಟೆಯಾಡಲು ಬಿಲ್ಲು, ಬಾಣಗಳನ್ನು ರಚಿಸಿಕೊಂಡ ಬಗ್ಗೆ ಆಫ್ರಿಕಾದ ವಿವಿಧ ಭಾಗಗಳಲ್ಲಿ ಕಲ್ಲಿನ ಮೇಲೆ ಕೊರೆದು ಮೂಡಿಸಿರುವ ಮಾನವ ಹಾಗೂ ಪ್ರಾಣಿ ಚಿತ್ರಗಳು ಕಂಡುಬಂದಿವೆ. ಇವೆಲ್ಲ ಅಂತ್ಯ ಹಳೆಯ ಶಿಲಾಯುಗಕ್ಕೆ ಸಂಬಂಧಿಸಿದವು ಆಗಿವೆ. ಫ್ರಾನ್ಸ್‌ನ ಲ್ಯಾಸ್ಕೊ ಮತ್ತು ಸ್ಪೇನಿನ ಅಲ್ಟಮೀರಗಳ ನೈಸರ್ಗಿಕ ಗುಹೆಗಳ ಬಂಡೆಗಳ ಮೇಲೆ ಗೀರು ರೇಖಾಚಿತ್ರಗಳೂ ಈ ಪ್ರದೇಶದಲ್ಲಿ ಸಾಕಷ್ಟು ಸಂಖ್ಯೆಯಲ್ಲಿವೆ ಹಾಗೂ ಕೇರಳದ ಕೊಲ್ಲಮ್ ಜಿಲ್ಲೆಯ ಪೂರ್ವ ಭಾಗದಲ್ಲಿರುವ ಚೆಂತರುನಿ ಗುಡ್ಡಪ್ರದೇಶ ತೇನ್‌ಮಲೈನಲ್ಲಿ ಸೂಕ್ಷ್ಮ ಶಿಲೋಪಕರಣಗಳು ಹಾಗೂ ಕೆಲವು ಕೊರೆದ ಗೀರು ಚಿತ್ರಗಳು ಕಂಡುಬಂದಿವೆ. ರೇಖಾ ರೂಪದಲ್ಲಿರುವ ಈ ಗೀರು ಚಿತ್ರಗಳನ್ನು ಬಂಡೆಯ ಮೇಲೆ ಕೊರೆಯಲಾಗಿದೆ.

ಫ್ರಾನ್ಸ್‌ನಲ್ಲಿ ೧೮೮೫ ರಲ್ಲಿ ಈ ರಿವಿರೆ ಎಂಬುವನು ದೋದೋಜ್ಞೆ ವಿಭಾಗದ ಲಾ ಮೌತ್‌ಗವಿಯಲ್ಲಿ ಕೊರೆದ ಮತ್ತು ವರ್ಣಚಿತ್ರಗಳನ್ನು ಶೋಧಿಸಿದನು. ಮರುವರ್ಷ ದೋದೋಜ್ಞೆಯ ಬಲ ಭಾಗದ ಫೇರ್-ನಾನ್ ಫೇರ್ ಎಂಬ ಗವಿಯಲ್ಲಿ ಕೊರೆದ ಪ್ರಾಣಿಗಳ ಚಿತ್ರಗಳು ಪತ್ತೆಯಾದವು. ಚೀನಾ ದೇಶದಲ್ಲಿ ಹೆಚ್ಚಾಗಿ ಬಂಡೆಯಲ್ಲಿ ಕೊರೆದ ಚಿತ್ರಗಳೇ ಅಧಿಕವಾಗಿವೆ.ಇವು ನೂತನ ಶಿಲಾಯುಗ ಸಂಸ್ಕೃತಿಯ ಕಾಲದವಾಗಿವೆ.

ಕಬ್ಬಿಣ ಯುಗದ ಬೃಹತ್ ಶಿಲಾಸಂಸ್ಕೃತಿಯ ಮಾನವನ ಕಾಲದಲ್ಲಿ ಕಬ್ಬಿಣ ಶೋಧವಾದ್ದರಿಂದ ಕಬ್ಬಿಣದ ಉಳಿಯನ್ನು ಬಳಸಿ ಬಯಲು ಬಂಡೆಗಳಲ್ಲಿ ಗೂಳಿ, ಕಾಡೆಮ್ಮೆಗಳ,ಆನೆ ಚಿತ್ರಗಳನ್ನು ಕೊರೆಯಲಾಗಿದೆ, ಹಿರೇಬೆಣಕಲ್ಲಿನ ಸಮೀಪದ ಚಿಕ್ಕರಾಂಪುರದಲ್ಲಿ ಬೃಹತ್ ಶಿಲಾಯುಗ ಕಾಲದ ಶವಸಹಿತ ಶಿಲಾವೃತ್ತ ಸಮಾಧಿಯೊಂದರ ಚಿತ್ರವಿರುವುದು, ಹಿರೇಬೆಣಕಲ್ಲಿನಲ್ಲಿ ಸ್ತ್ರೀಯ ಪ್ರಸವದ ಅಪರೂಪದ ಚಿತ್ರವಿರುವುದು ಶೋಧವಾಗಿದೆ.

**ಭಾರತದಲ್ಲಿ** ಇರ್ವಿನ್ ನ್ಯೂ ಮೇಯರ್ ಗುರುತಿಸುವಂತೆ ಅಲ್ಟಮಿರ ಗವಿಯ ಶೋಧಕ್ಕಿಂತ ಹನ್ನೆರಡು ವರ್ಷ ಮೊದಲೇ (೧೮೬೭-೬೮) ಭಾರತದಲ್ಲಿ ಅರ್ಚಿಬಾಲ್ಡ್ ಕಾರ್ಲೈಲ್ ಉತ್ತರ ಪ್ರದೇಶದ ಮಿರ್ಜಾಪುರ್ ಜಿಲ್ಲೆಯ ಶೋಹಗಿ ಘಾಟ್‌ನ ಕಲ್ಲಾಸರೆಯಲ್ಲಿ ಚಿತ್ರಗಳನ್ನು ಕಂಡರು. ಆ ಬಗೆಗೆ ಅವರ ಲೇಖನ ಕೆಲ ವರ್ಷಗಳ ನಂತರ ಪ್ರಕಟವಾಯಿತಾದರೂ ಅವರ ಶೋಧನೆ ಮತ್ತು ಅದೇ ಅವಧಿಯ ೧೮೮೦ ರ ಸಮಯದಲ್ಲಿ ಹೂಬರ್ಟ್‌ನಾಕ್ಸ್‌ರವರು ಬಳ್ಳಾರಿ ಸಮೀಪದ ಕುಪ್ಪಗಲ್ ಗ್ರಾಮದ ಗುಡ್ಡದಲ್ಲಿ ಕುಟ್ಟಿ ಬಿಡಿಸಿದ ಚಿತ್ರಗಳನ್ನು ನೋಡಿ ಅವುಗಳ ಛಾಯಾಚಿತ್ರಗಳನ್ನು ತೆಗೆದು ರಾಬರ್ಟ್‌ಬ್ರೂಸ್ ಫೂಟ್‌ರಿಗೆ ಕಳಿಸಿಕೊಟ್ಟರು. ಫೂಟ್ ಅವರು ೧೯೧೬ ರಲ್ಲಿ ಪ್ರಕಟಿಸಿದ "ದಿ ಫೂಟ್ ಕಲೆಕ್ಷನ್ ಆಫ್ ಇಂಡಿಯನ್ ಪ್ರಿ ಹಿಸ್ಟಾರಿಕ್ ಆಂಡ್ ಫೋಟೋ ಹಿಸ್ಟಾರಿಕ್ ಆಂಟಿಕ್ವಿಟಿಸ್" ಪುಸ್ತಕದಲ್ಲಿ ಇವುಗಳ ವರ್ಣನೆಯನ್ನು ಕೊಟ್ಟಿದ್ದಾರೆ. ಹೀಗೆ ಭಾರತದ ಗವಿವರ್ಣ ಮತ್ತು ಬಂಡೆಚಿತ್ರಗಳನ್ನು ಮೊದಲಿಗೆ ಬೆಳಕಿಗೆ ತಂದ ಕೀರ್ತಿ ಆರ್ಚಿಬಾಲ್ಡ್ ಕಾರ್ಲೈಲ್ ಮತ್ತು ಹೂಬರ್ಟ್‌ನಾಕ್ಸ್ ರವರಿಗೆ ಸಲ್ಲುತ್ತದೆ. ಭಾರತದಲ್ಲಿ ಸದ್ಯ ತಿಳಿದಿರುವಂತೆ ಸು. ೨೦೦ ಕ್ಕೂ ಅಧಿಕ ಸ್ಥಳಗಳಲ್ಲಿ ೬ ಸಾವಿರಕ್ಕೂ ಹೆಚ್ಚು ಚಿತ್ರಿತ ಕಲ್ಲಾಸರೆ, ಗವಿ ಬಂಡೆಗಲ್ಲು ಚಿತ್ರಗಳ ನೆಲೆಗಳು ಕಂಡುಬಂದಿವೆ.

ಕರ್ನಾಟಕದಲ್ಲಿ ೧೮೮೦ ರ ಸಮಯದಲ್ಲಿ ಹ್ಯೂಬರ್ಟ್ ನಾಕ್ಸ್ ಕುಪ್ಪಗಲ್‌ನಲ್ಲಿ ಕುಟ್ಟಿದ ಚಿತ್ರಗಳನ್ನು ಶೋಧಿಸಿದ ನಂತರ ೧೯೫೪ ರಲ್ಲಿ ಲಿಯೋನಾರ್ಡ್‌ಮನ್ ಅವರು ಹಿರೇಬೆಣಕಲ್ (ಗಂಗಾವತಿ ತಾ. ಕೊಪ್ಪಳ ಜಿಲ್ಲೆ) ಗುಡ್ಡದಲ್ಲಿ ಮೂರು ಗವಿ ವರ್ಣಚಿತ್ರಗಳನ್ನು ಸುಮಾರು ಅದೇ ಸಮಯದಲ್ಲಿ ಭಿಲ್ಲಮರಾಯನ ಗುಡ್ಡದಲ್ಲಿ ಕುಟ್ಟಿದ ಮತ್ತು ಗೀರು ಚಿತ್ರಗಳನ್ನು ಕಂಡುಹಿಡಿದರು. ಕರ್ನಾಟಕದ ಪ್ರಾಗಿತಿಹಾಸ ಕಾಲದ ಕಲೆಯ ಶೋಧನೆ ಮತ್ತು ಅಧ್ಯಯನವನ್ನು ಡಾ.ಅ.ಸುಂದರ ಮತ್ತು ಇತರರು ಬಯಲು ಬಂಡೆಚಿತ್ರಗಳನ್ನು ಶೋಧಿಸಿ ಅಧ್ಯಯನ ಮಾಡಿದ್ದಾರೆ. ಶಿವಮೊಗ್ಗ ಜಿಲ್ಲೆಯ ಹೊಳಲೂರು (ಶಿವಮೊಗ್ಗ ತಾ.) ನಲ್ಲಿ ಕೊರೆದು ಮೂಡಿಸಿದ ಆನೆ, ಗೂಳಿಗಳ, ಜಿಂಕೆಗಳು, ಮನುಷ್ಯ, ಆಮೆ ಮತ್ತು ಅರಳಿದ ಕಮಲ ಪುಷ್ಪದ ರೇಖಾಚಿತ್ರಗಳಿವೆ.

ಅಂಕೋಲಾದಿಂದ ಸುಮಾರು ಒಂದೂವರೆ ಕಿ.ಮೀ. ಆಗ್ನೇಯ ದಿಕ್ಕಿಗಿರುವ ಬೋಳೆ ಪ್ರದೇಶದಲ್ಲಿ ಬಂಡೆಗಳ ಮೇಲೆ ಕೊರೆದ ರೇಖಾಕೃತಿಗಳಿವೆ. ವಿಶಾಲ ಸಮತಟ್ಟಾದ ಜಂಬಿಟ್ಟಿಗೆಯ ಕಲ್ಲಿನ ಮೇಲೆ ಎರಡು ಎದುರು ಬದುರಾಗಿ ನಿಂತಿರುವ ಗೂಳಿಗಳು ಅಥವಾ ಹಸುಗಳ, ಸೊಂಡಿಲನ್ನು ಎತ್ತಿದ ಆನೆ, ಹಾವು, ಜಿಂಕೆ, ಮೀನು ಮತ್ತು ನಾಲ್ಕು ಭಾಗಗಳುಳ್ಳ ಒಂದು ಆಯತಾಕೃತಿಯ ಚಿತ್ರಗಳಿವೆ. ಕರ್ನಾಟಕದ ಬಾದಾಮಿ-ಐಹೊಳೆ ಪ್ರದೇಶ, ರಾಯಚೂರು-ಕೊಪ್ಪಳ-ಬಳ್ಳಾರಿ-ಚಿತ್ರದುರ್ಗ ಪ್ರದೇಶ, ಮಲೆನಾಡು ಪ್ರದೇಶ ಹಾಗೂ ಕರಾವಳಿ ಪ್ರದೇಶಗಳಲ್ಲಿ ಬಯಲುಬಂಡೆ ಚಿತ್ರಗಳ ನೆಲೆಗಳಿವೆ. ರಾಯಚೂರು-ಬಳ್ಳಾರಿ ಪ್ರದೇಶದ ಹಿರೇಬೆಣಕಲ್, ಹಂಪಿಯ ಸುತ್ತಮುತ್ತ ಜಿಂಕೆ, ಎತ್ತು, ಹಸು, ಕಾಡುಕೋಣ, ಹೆಬ್ಬಾವು, ಸಾರಂಗ, ಕಡವೆ, ಮೀನು, ನವಿಲು, ನಾಯಿ, ಟಗರು, ಹೋತ, ಗೂಳಿ, ಹುಲಿ, ಚಿರತೆ, ಆನೆ, ಕುದುರೆ, ಮಂಗ, ಹುಡ ಮುಂತಾದ ಚಿತ್ರಗಳಿವೆ.ಹಾಗೂ ಸಾಣಿಕರೆ (ಡಾ.ಎಸ್.ಜಿ.ರಾಮದಾಸರೆಡ್ಡಿ-ಚಳ್ಳಕರೆ.ತಾ.) ಕುಟ್ಟಿ ನಿರ್ಮಿಸಿದ ಹಂದಿ ಶಿಲ್ಪ, ಕುಂತಿಬೆಟ್ಟ (ಡಾ.ಎಸ್.ಜಿ.ರಾಮದಾಸರೆಡ್ಡಿ-ಪಾಂಡವಪುರ.ತಾ) ಎರಡು ನವಿಲು ಚಿತ್ರಗಳನ್ನು ಏಕ ಮುಖವಾಗಿ ಕುಟ್ಟಿ ನಿರ್ಮಿಸಿದ್ದಾರೆ.

ಪ್ರಾಕ್ಚಾರಿತ್ರಿಕ ಶಿಲಾಚಿತ್ರಗಳು ಆದಿ ಮಾನವನ ರಚನೆಗಳಾಗಿದ್ದು ಅವುಗಳ ವಿಷಯ ಪ್ರಮುಖವಾಗಿ ಪ್ರಾಣಿ ಚಿತ್ರಗಳೇ ಆಗಿವೆ. ಆರಂಭಿಕ ರಚನೆಗಳಾದ ಅಂತ್ಯ ಹಳೆಶಿಲಾಯುಗದಿಂದ ಹಿಡಿದು ಕಬ್ಬಿಣಯುಗದ ಬೃಹತ್ ಶಿಲಾಯುಗದವರೆಗೂ ಶಿಲಾಚಿತ್ರಗಳಲ್ಲಿ ಪ್ರಾಣಿ ಚಿತ್ರಗಳೇ ಪ್ರಧಾನ ಸ್ಥಾನ ಪಡೆದಿವೆ.
ಪ್ರಾಣಿಗಳ ದೇಹವನ್ನು ಬಾಹ್ಯರೇಖಾ ವಿನ್ಯಾಸಗಳ ಮೂಲಕ ಹೆಚ್ಚಾಗಿ ಚಿತ್ರಿಸಲಾಗಿದೆ. ಈ ತರಹದ ಆನೆಯ ಚಿತ್ರ ನನ್ನ ಕ್ಷೇತ್ರ ಕಾರ್ಯದಲ್ಲಿ ಶೋಧವಾಗಿದೆ. ಈ ಶಿಲ್ಪದ ಬಗ್ಗೆ ಸಂಕ್ಷಿಪ್ತವಾದ ಅಧ್ಯಯನ ಮಾಡೋಣ.

ಗುಂಡ್ಲಹಳ್ಳಿ ತುಮಕೂರು ಜಿಲ್ಲೆ,ಪಾವಗಡ ತಾಲ್ಲೂಕಿನ ಒಂದು ಗ್ರಾಮ. ಈ ಎಡೆಯ ಉತ್ತರಕ್ಕೆ ಇರುವ ಗ್ರಾನೈಟ್ ಗುಡ್ಡದ ಗುಹೆಯಲ್ಲಿರುವ ಶ್ರೀರಾಮದೇವರ ಗುಡಿಯ ಬಲಭಾಗದ ಇಳಿಜಾರಾದ ದೊಡ್ಡ ಬಂಡೆಯ ಮೇಲೆ ಶೋಧವಾಗಿದೆ. ಗುಡ್ಡವು ಪೂರ್ವಾಭಿಮುಖವಾಗಿದೆ. ಗೀರು ರೇಖಾ ಚಿತ್ರವನ್ನು ಏಕಪ್ರಕಾರವಾಗಿ ಮೊನಚಾದ ಉಳಿಯಂತಹ ಉಪಕರಣಗಳಿಂದ ಗೀರುಗಳಾಗಿ ಕೊರೆದು ಮಾಡಿರುವ ಶಿಲ್ಪವಾಗಿದೆ. ಗುಡ್ಡ ಮತ್ತು ಆನೆ ಚಿತ್ರದ ಪಕ್ಕದಲ್ಲಿ ಕೆರೆ ಇದೆ ಹಾಗೂ ವೀರಗಲ್ಲುಗಳಿವೆ.



ಪ್ರಸ್ತುತ ಗುಹೆಯ ಮುಂಭಾಗದ ಇಳಿಜಾರಾದ ದೊಡ್ಡ ಬಂಡೆಯ ಮೇಲೆ ೭೭ ಇಂಚು ಅಗಲ, ೬೫ ಇಂಚು ಎತ್ತರಯಿರುವ ದಷ್ಟಪುಷ್ಠವಾದ ಮದಿಸಿದ ಗಂಡು ಆನೆಯ ಗೀರು ರೇಖಾ ಶಿಲ್ಪವಿದೆ. ಆನೆಯು ಎರಡು ಉದ್ದನೆಯ ದಂತ ಕೊಡುಗಳನ್ನು ಹೊಂದಿದೆ. ಸೊಂಡಿಲನ್ನು ಭೂಮಿಯ ಕಡೆಗೆ ಇಳಿ ಬಿಟ್ಟಿದೆ. ಆನೆಯ ಶಿಲ್ಪವನ್ನು ಏಕಮುಖವಾಗಿ ಮೊನೆಯಾದ ಉಳಿಯಾಕಾರದ ಉಪಕರಣದಿಂದ ಕೊರೆದು ರೇಖಾಕೃತಿಯನ್ನು ನಿರ್ಮಿಸಿದ್ದಾನೆ. ಬಾಲ ಚಿಕ್ಕದಾಗಿದೆ. ಆನೆ ಚಲನಾ ಸ್ಥಿತಿಯಲ್ಲಿದೆ, ಮುಂಭಾಗದ ಬಲಗಾಲನ್ನು ಮೇಲೆ ಎತ್ತಿದೆ, ಎಡಗಾಲನ್ನು ಮುಂದಕ್ಕೆ ಇಟ್ಟು ನೆಲಕ್ಕೂರಿದೆ, ಹಿಂದಿನ ಎಡಗಾಲನ್ನು ನೆಲಕ್ಕೂರಿದೆ, ಬಲಗಾಲನ್ನು ಮೇಲೆ ಎತ್ತಿದೆ, ನಾಲ್ಕು ಕಾಲುಗಳ ಗೋರಸುಗಳನ್ನು ಸ್ಪಷ್ಟವಾಗಿ ಕೊರೆಯಲಾಗಿದೆ. ಶಿಲ್ಪಿ ಆನೆ ಬಿಡಿಸುವುದಕ್ಕೋಸ್ಕರ ಪತ್ಯೇಕ ದೊಡ್ಡ ಬಂಡೆಯನ್ನು ಆರಿಸಿಕೂಂಡು ವಿಶಾಲವಾಗಿ ದೊಡ್ಡ ಶಿಲ್ಪವನ್ನು ರಚಿಸಿದ್ದಾನೆ. ಈ ಆನೆಯ ರೇಖಾಶಿಲ್ಪ ಭಾರತದಲ್ಲಿ ದೊರಕಿರುವ ರೇಖಾಚಿತ್ರಗಳಿಗಿಂತ ಭಿನ್ನವಾಗಿದೆ ಹಾಗೂ ಭಾರತದಲ್ಲೇ ಅಪರೂಪವಾದ ರೇಖಾಚಿತ್ರವಾಗಿದೆ.

ಆನೆ ಚಿತ್ರ ಇರುವ ಬಂಡೆ ಬಿಸಿಲಿನ ತಾಪಕ್ಕೆ ಚಕ್ಕೆಗಳು ಎದ್ದು ಆನೆಯ ಚಿತ್ರ ಹಾಳಾಗುತ್ತಿದೆ. ತಕ್ಷಣ ಈ ಶಿಲ್ಪವನ್ನು ಸಂರಕ್ಷಿಸ ಬೇಕಾಗಿದೆ.

ಆನೆಯ ರೇಖಾಶಿಲ್ಪಗಳು ಕರ್ನಾಟಕದಲ್ಲಿ ಕುರುಗೋಡು, ಬ್ರಹ್ಮಗಿರಿಯ ಬಂಡೆಯ ಮೇಲಿರುವ ದಂತರಹಿತ ಆನೆ, ಹೊಳಲೂರು, ಅಂಕೋಲಾಗಳಲ್ಲಿ ಶೋಧವಾಗಿದ್ದು ಹೆಚ್ಚಾಗಿ ಈ ನೆಲೆಯ ಆನೆಯ ರೇಖಾಶಿಲ್ಪಕ್ಕೆ ಹಾಗೂ ಇತರೆ ಕೆಲವೇ ಲಕ್ಷಣಗಳಿಗೆ ಹೋಲಿಕೆಯಾಗುತ್ತಿವೆ. ಈ ನೆಲೆಯ ಆನೆಯ ರೇಖಾ ಶಿಲ್ಪದ ಹಾಗೇ ಆಫ್ರಿಕಾದ ಪಶ್ಚಿಮ ಲಿಬಿಯಾದ ಅಕಾಕಸ್ ಬೆಟ್ಟದ ಸಾಲಿನಲ್ಲಿ, ದಕ್ಷಿಣ ಲಿಬಿಯದ ಪುರಾತತ್ವ ನೆಲೆಗಳಲ್ಲಿ ಶೋಧವಾಗಿರುವುವು ಸ್ವಲ್ಪಮಟ್ಟಿಗೆ ಹೋಲಿಕೆಯಾಗುತ್ತಿವೆ ಆದರೆ ಕಲ್ಲಿನ ಬಳಕೆ ವಿಭಿನ್ನವಾಗಿದೆ ಹಾಗೂ ಉತ್ತರ ಪ್ರದೇಶದ ಕಾಲ್ಸೀ ಬಂಡೆಯ ಮೇಲಿನ ದಂತಗಳ ಸಹಿತ ಆನೆ ರೇಖಾಚಿತ್ರ , ಒರಿಸ್ಸಾ,ಕೇರಳ,ಆಂಧ್ರಪ್ರದೇಶ ಇತರೆ ರಾಜ್ಯಗಳಲ್ಲಿ ಕೆಲವೇ ಆನೆ ಗೀರು ರೇಖಾಚಿತ್ರಗಳನ್ನು ಬಿಟ್ಟರೆ, ಇತರೆ ವಿವಿಧ ಪ್ರಾಣಿಗಳ ರೇಖಾ ಚಿತ್ರಗಳು ಕಂಡು ಬಂದರೂ ಆನೆಯ ಗೀರು ರೇಖಾಶಿಲ್ಪಗಳು ಪತ್ತೆಯಾಗಿರುವುದು ಭಾರತದಲ್ಲಿ ಕಡಿಮೆಯೆಂದೇ ಹೇಳಬೇಕು.

ಈ ನೆಲೆಯ ಆನೆಯ ಶಿಲ್ಪವನ್ನು ಚಿತ್ರಕಾರ ಎಲ್ಲಾ ನೆಲೆಗಳ ಆನೆಗಳಿಗಿಂತ ಸ್ಪಷ್ಟವಾಗಿ ವಸ್ತುಸ್ಥಿತಿಯನ್ನು ಚಿತ್ರಿಸಿದ್ದಾನೆ, ಕಾಲಿನಗೋರಸು, ನಡೆಯುವ ಶೈಲಿ, ಸೊಂಡಿಲು, ದಷ್ಟಪುಷ್ಠವಾದ ದೇಹ ,ದಂತಗಳ ಶೈಲಿ ವಿಶೇಷವಾಗಿದೆ. ಅನೆಯ ಗಾತ್ರದ ಆಧಾರದ ಮೇಲೆ ಅಂದು ಈ ಭೂಭಾಗ ಅರಣ್ಯದ ಭಾಗವಾಗಿತ್ತೆಂದು,ನೀರಿನ ಸೌಲಭ್ಯ ಉತ್ತಮವಾಗಿತ್ತೆಂದು ಹೇಳಬಹುದು ಹಾಗೂ ಕರ್ನಾಟಕ, ಕೇರಳ, ಉತ್ತರ ಪ್ರದೇಶ, ಒರಿಸ್ಸಾ , ಆಂಧ್ರಪ್ರದೇಶಗಳಲ್ಲಿ ಹಾಗೂ ದಕ್ಷಿಣ ಆಫ್ರಿಕಾದ ಕೇಂದ್ರೀಯ ಸಹರಾ ಭೂಪ್ರದೇಶದ ಲಿಬಿಯಾ, ಮಾರೊಕ್ಕೋ ಹಾಗೂ ಇತರ ನೆಲೆಗಳಲ್ಲಿ ಆನೆಗಳ ಗೀರು ರೇಖಾಚಿತ್ರಗಳನ್ನು ನಿರ್ಮಿಸಿರುವುದು, ಅಂದು ಈ ಜನರಿಗಿದ್ದ ಕಲೆಯ ಆಸಕ್ತಿ ಬಗ್ಗೆ ಹಾಗೂ ಅಂದೇ ಗೀರು ರೇಖಾ ಚಿತ್ರಕಾರರು ಪ್ರಪಂಚದ ಎಲ್ಲ ಕಡೆ ಇದ್ದರೆಂದು ತಿಳಿಯಲು ಸಹಕಾರಿಯಾಗಿದೆ.

ಇತ್ತೀಚೆಗೆ ವಿವಿಧ ವೈಜ್ಞಾನಿಕ ನಿರಪೇಕ್ಷ ಕಾಲ ನಿರ್ಣಯ ವಿಧಾನಗಳಿಂದ ಶಿಲಾಚಿತ್ರಗಳ ಕಾಲಮಾನವನ್ನು ತಿಳಿಯುವ ಪ್ರಯತ್ನಗಳು ಪ್ರಾರಂಭವಾಗಿವೆ. ಇಂಗಾಲ ೧೪ ಹಾಗೂ ಆಕ್ಸಲರೇಟೆಡ್ ಮಾಸ್ ಸ್ಪೆಕ್ಟ್ರೋಮೆಟ್ರಿ (ಎ.ಎಂ.ಎಸ್) ತಂತ್ರಗಳನ್ನು ಯುರೋಪಿನಲ್ಲಿ ಯಶಸ್ವಿಯಾಗಿ ಬಳಸಿಕೊಳ್ಳಲಾಗಿದೆ. ಇದರಿಂದಾಗಿ ಮಾನವನ ಕಲಾ ಸೃಷ್ಟಿಯ ಮೊದಲ

ಹೆಜ್ಜೆಗಳು ಪಶ್ಚಿಮ ಯುರೋಪ್ ಹಾಗೂ ಆಫ್ರಿಕಾಗಳಲ್ಲಿ ಪ್ರಥಮ ಬಾರಿಗೆ ಕಂಡುಬಂದವೆಂಬುದನ್ನು ಕಂಡುಕೊಳ್ಳಲಾಯಿತು. ಕ್ರಿ.ಪೂ. ಸು. ೩೦,೦೦೦ ವರ್ಷಗಳ ಹಿಂದೆ ಅಂತ್ಯ ಹಳೆ ಶಿಲಾಯುಗದ ಕಾಲದಲ್ಲಿ ಯುರೋಪಿನಲ್ಲಿ ಫ್ರಾನ್ಸ್, ಸ್ಪೇನ್ ಮತ್ತು ಆಫ್ರಿಕಾ ದೇಶಗಳಲ್ಲಿ ಆದಿಮ ಚಿತ್ರಗಳು ಸೃಷ್ಟಿಯಾದವು.

ಭಾರತದ ಮಧ್ಯಪ್ರದೇಶದ ಭೀಂಬೇಟ್ಕದ ಅತ್ಯಂತ ಪ್ರಾಚೀನ ಚಿತ್ರಗಳು ಅಂತ್ಯ ಹಳೆ ಶಿಲಾಯುಗದ ಕಾಲದವಾಗಿದ್ದು, ಇವು ಸುಮಾರು ೧೨,೦೦೦ ವರ್ಷ ಹಳೆಯವಾಗಿವೆ ಹಾಗೂ ಅತ್ಯಂತ ಇತ್ತೀಚೆಗೆ ೧೯೯೪ ರಲ್ಲಿ ಪತ್ತೆಯಾದ ಚೂವೆಟ್ ಗುಹಾ ಚಿತ್ರಗಳು ೩೦,೦೦೦ ವರ್ಷಗಳಷ್ಟು ಹಳೆಯವೆಂದು ಇಂಗಾಲ ೧೪ ಕಾಲನಿರ್ಣಯ ವಿಧಾನದಿಂದ ನಿರ್ಧರಿಸಲಾಗಿದೆ. ಭಾರತದ ಕೇರಳ ರಾಜ್ಯದ ತೇನ್‌ಮಲೈನ ಚೆಂತರುನಿ ಗುಡ್ಡ ಪ್ರದೇಶ ಚಿತ್ರಗಳು ಇಂಗಾಲ ೧೪ ರಿಂದ ೫೨೧೦ ± ೧೧೦ ಮತ್ತು ೫೧೨೦ ± ೧೨೦ ಕಾಲದವೆಂದು ನಿರ್ಧರಿಸಲಾಗಿದೆ. ಇವು ಸೂಕ್ಷ್ಮ ಶಿಲಾಯುಗದ ಸಂಸ್ಕೃತಿಗೆ ಸೇರಿದವು. ಹೀಗೆ ಶಿಲಾ ಚಿತ್ರಗಳ ಕಾಲವನ್ನು ಇತ್ತೀಚೆಗೆ ವೈಜ್ಞಾನಿಕವಾಗಿ ನಿರ್ಧರಿಸಬಹುದಾಗಿದೆ

ಈ ನಿಟ್ಟಿನಲ್ಲಿ ಡಾ.ಅ.ಸುಂದರ, ಶರಣಬಸಪ್ಪ ಕೋಲ್ಕಾರ, ಪ್ರೊ. .ರು.ಮ.ಷಡಕ್ಷರಯ್ಯ, ಪ್ರೊ.ಶ್ರೀಶೈಲ.ಆರಾಧ್ಯ,ಪ್ರೊ.ಲಕ್ಷ್ಮಣ್‌ತೆಲಗಾವಿ,ಪ್ರೊ.ವಸಂತಶೆಟ್ಟಿ,ಪ್ರೊ.ರಘುನಾಥಭಟ್ಟರು, ಡಾ.ಹನುಮಾನಾಯಕ್, ಪ್ರೊ.ಟಿ.ಮುರುಗೇಶ್, ಡಾ.ಎಸ್.ಜಿ.ರಾಮದಾಸರೆಡ್ಡಿ ಇತರರು ಕರ್ನಾಟದ ಹಾಗೂ ಇತರ ಭೂಭಾಗಗಳಲ್ಲಿ ಗೀರು ರೇಖಾಚಿತ್ರಗಳನ್ನು ಶೋಧಿಸಿ ಅಧ್ಯಯನ ನಡೆಸಿದ್ದಾರೆ. ಕಾಲಮಾನದ ದೃಷ್ಟಿಕೋನದಲ್ಲಿ ಕರ್ನಾಟಕ,ಆಂಧ್ರಪ್ರದೇಶ,ಕೇರಳ ನೆಲೆಗಳಲ್ಲಿ ಶೋಧವಾಗಿರುವ ಈ ಗೀರು ರೇಖಾಶಿಲ್ಪ ಶಿಲಾ-ತಾಮ್ರಯುಗ ಸಂಸ್ಕೃತಿಯ (ಕ್ರಿ.ಪೂ.೧೪೦೦-೮೦೦) ಕೊನೆಯ ಕಾಲಾವಾಧಿ, ಇಲ್ಲ ಬೃಹತ್ ಶಿಲಾಯುಗ (ಕ್ರಿ.ಪೂ.೧೦೦೦-೫೦೦) ಸಂಸ್ಕೃತಿಯ ಕಾಲದವುಗಳಾಗಿರಬೇಕೆಂದು ಪುರಾತತ್ವ ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಈ ನೆಲೆಯ ಆನೆಯ ಗೀರು ರೇಖಾಚಿತ್ರದ ಕಾಲಾವಾಧಿಯನ್ನು ಬೃಹತ್ ಶಿಲಾಯುಗ (ಕ್ರಿ.ಪೂ.೧೦೦೦-೫೦೦) ಸಂಸ್ಕೃತಿಯ ಕಾಲಮಾನದೆಂದು ಹೇಳಬಹುದು.ಹೆಚ್ಚಿನ ಅಧ್ಯಯನದ ಅಗತ್ಯತೆ ಇದೆ.

ಮನವಿ. ;-ಬಿಳಿ ಗ್ರಾನೈಟ್ ಬಂಡೆ ಬಿಸಿಲಿನ ತಾಪಕ್ಕೆ ಕಲ್ಲಿನ ಚಕ್ಕೆಗಳು ಎದ್ದು ಆನೆ ಚಿತ್ರ ಹಾಳಾಗುತ್ತಿದೆ ,ಸ್ಥಳೀಯರು,ಸಂಬಂಧ ಪಟ್ಟ ಇಲಾಖೆ ಉಳಿಸುವ ಕಾರ್ಯ ತುರ್ತಾಗಿ ಮಾಡ ಬೇಕಾಗಿದೆ. ಪಕ್ಕದ ಗ್ರಾಮವಾದ ದಂಡಪಾಳ್ಯದ ಶ್ರೀ. ಹೆಚ್.ಮಂಜುನಾಥರೆಡ್ಡಿ ಹಾಗೂ ಶ್ರೀ.ಎ.ಆರ್.ವಿಕಾಸ್‌ರವರ ಸಹಕಾರದೂಂದಿಗೆ ಕ್ಷೇತ್ರಕಾರ್ಯ ಮಾಡಿ ಪತ್ತೆ ಹಚ್ಚುವಲ್ಲಿ ನೆರವಾಗಿದ್ದಾರೆ. ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಪರಾಮರ್ಶನ ಗ್ರಂಥಗಳು


೧) ಸುಂದರ. ಅ, ೧೯೯೪, *ಕರ್ನಾಟಕದ ಪ್ರಾಗಿತಿಹಾಸ ಕಾಲದ ಕಲೆ,* ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೨) ಸುಂದರ. ಅ, (ಸಂ), ೧೯೯೭, *ಕರ್ನಾಟಕ ಚರಿತ್ರೆ, ಸಂ.೧,* ಕನ್ನಡ ವಿಶ್ವವಿದ್ಯಾಲಯ ಹಂಪಿ

೩) ಸುಂದರ. ಅ, (ಸಂ), *ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ.* ೨೦೦೯, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪) ಸುಂದರ. ಅ, ರಾಜೇಂದ್ರನ್. ಪಿ, ಶೋಭಾ. ವಿ ಹಾಗೂ ಗಿರಿರಾಜ್‌ಕುಮಾರ, ೨೦೦೯, *ಶಿಲಾಚಿತ್ರಕಲೆ. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ.* ಪುಟ ೧೦೧೨ ರಿಂದ ೧೦೨೫, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೫) ಶರಣಬಸಪ್ಪ ಕೋಲ್ಕಾರ, ೨೦೧೦, *ಶಿಲಾಯುಗದ ಗವಿಚಿತ್ರಗಳು,* ಬಸವ ಪ್ರಕಾಶನ, ಕಲಬುರ್ಗಿ

೬) ಎಸ್,ವೈ.ಸೋಮಶೇಖರ್.(ಸಂ)ಬ್ರಹ್ಮಗಿರಿ-ಡಾ.ಎಸ್.ಜಿ.ರಾಮದಾಸರೆಡ್ಡಿ.ಚಿತ್ರಕಲೆ,ಕನ್ನಡ ವಿಶ್ವವಿದ್ಯಾನಿಲಯ,ಹಂಪಿ, ಐ.ಎಸ್.ಬಿ.ಎನ್.- ೯೭೮೯೩೮೦೯೯೪೪೦೬,೨೦೧೦.

೭) ಕನ್ನಡ ವಿಷಯ ವಿಶ್ವಕೋಶ,ಇತಿಹಾಸ ಮತ್ತು ಪುರಾತತ್ವ, ಮೈಸೂರು ವಿಶ್ವ ವಿದ್ಯಾಲಯ,೨೦೦೯,ಪುಟ-೧೦೧೯

೮) ಗೂಗಲ್ ತಂತ್ರಜ್ಞಾನದಿಂದ- ದಕ್ಷಿಣ ಆಫ್ರಿಕಾದ ಕೇಂದ್ರೀಯ ಸಹರಾ ಭೂಪ್ರದೇಶದ ಲಿಬಿಯಾ,-ಮಾರೊಕ್ಕೋ

೯) ಪ್ರೊ.ಲಕ್ಷಣ್ ತೆಲಗಾವಿ -ಹರತಿಸಿರಿ,-೧೯೮೭

೧೦) ಡಾ.ರಾಮದಾಸರೆಡ್ಡಿ, ಎಸ್.ಜಿ ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚರಿತ್ರಿಕ ಅಧ್ಯಯನ, ೨೦೦೯.

೧೧) ಪ್ರಜಾವಾಣಿ ದಿನಪತ್ರಿಕೆ-೨೮-೦೫-೨೦೧೩

೧೨) ವಿಜಯವಾಣಿ ದಿನಪತ್ರಿಕೆ-೨೮-೦೫-೨೦೧೩

೧೩) ದಿ ಹಿಂದು ದಿನ ಪತ್ರಿಕೆ-೩೦-೦೫-೨೦೧೩

೧೪) ಪ್ರೊ.ಲಕ್ಷಣ್ ತೆಲಗಾವಿ-ಮೌರ್ಯ ಮತ್ತು ಶಾತವಾಹನ ಯುಗ.೨೦೦೪.ಪುಟ-೭೬-೭೭